**2 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು**

**ಎಸ್.ಸಿ. ನಂ. 146 /2022**

P.W : 25

C.W: 37

**ದಿನಾಂಕ 18.12.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**

**ಹೆಸರು** : ಹನುಮಂತಪ್ಪ ಪಿ.ಬಿ.

**ತಂದೆಯ ಹೆಸರು** : ಲೇಟ್ ಆರ್.ಪಿ. ಬೀಮಪ್ಪ

**ವಯಸ್ಸು** : 62 ವರ್ಷ

**ವೃತ್ತಿ** : ನಿವೃತ್ತ ಪಿ.ಎಸ್.ಐ.

**ವಾಸಸ್ಥಳ** : ಪಾವಗಡ

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ನಾನು ದಿ.11.07.2020 ರಿಂದ 31.01.2023 ರವರೆಗೆ ಶಿರಾ ಪೋಲೀಸ್ ಠಾಣೆಯಲ್ಲಿ ಪಿ.ಎಸ್.ಐ ಕಾರ್ಯನಿರ್ವಹಿಸಿರುತ್ತೇನೆ.

2. ದಿ. 02.06.2022 ರಂದು ಮಧ್ಯಾಹ್ನ 02.30 ಗಂಟೆಗೆ ನಾನು ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಚಾ.ಸಾ.1 ರವರು ಠಾಣೆಗೆ ಹಾಜರಾಗಿ ಸಲ್ಲಿಸಿದ ಗಣಕೀಕೃತ ಲಿಖಿತ ದೂರನ್ನು ಸ್ವೀಕರಿಸಿ, ಠಾಣಾ ಮೊಕದ್ದಮೆ ಸಂಖ್ಯೆ 104/2022 ಪ್ರಕರಣ ದಾಖಲಿಸಿ ಪ್ರಥಮ ವರ್ತಮಾನ ವರದಿ ತಯಾರಿಸಿ ಹಿರಿಯ ಅಧಿಕಾರಿಗಳಿಗೆ ಮತ್ತು ಘನ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಸಾಕ್ಷಿ

ದೂರು ಮತ್ತು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ದೂರು ಈಗಾಗಲೇ ನಿ.ಪಿ.1 ಎಂದು ಗುರುತಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.1(ಬಿ) ಎಂದು ಗುರುತು ಮಾಡಲಾಯಿತು. ಪ್ರಥಮ ವರ್ತಮಾನ ವರದಿ ಮತ್ತು ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.35 ಮತ್ತು ಸಾಕ್ಷಿಯ ಸಹಿಯನ್ನು ನಿ.ಪಿ.35(ಎ) ಎಂದು ಗುರುತು ಮಾಡಲಾಯಿತು.

2. ಅದೇ ದಿನ ಕತ್ಯ ನಡೆದ ಸ್ಥಳವಾದ ಕಮಲನಾಯಕನ ತಾಂಡ್ಯ, ಬುಕ್ಕಾಪಟ್ಟಣಕ್ಕೆ ಭೇಟಿ ನೀಡಿ ಪಿರ್ಯಾದುದಾರರು ತೋರಿಸಿದ ಸ್ಥಳದಲ್ಲಿ ಚಾ.ಸಾ.5 ಮತ್ತು 6 ರವರ ಸಮಕ್ಷಮ ನಿ.ಪಿ.2 ರಂತೆ ಮಧ್ಯಾಹ್ನ 04.00 ರಿಂದ 05.00 ಗಂಟೆಯವರೆಗೆ ಸ್ಥಳ ಪಂಚನಾಮೆಯನ್ನು ಮಾಡಿರುತ್ತೇನೆ. ಸಾಕ್ಷಿ ನಿ.ಪಿ.2 ರಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.2(ಡಿ) ಎಂದು ಗುರುತಿಸಲಾಯಿತು.

3. ಪಿರ್ಯಾದುದಲ್ಲಿ ಆರೋಪಿಗಳು ಮೃತ ರವಿಚಂದ್ರ ನಾಯಕ ರವರ ಶವವನ್ನು ಮನೆಯ ಸಮೀಪ ಗುಂಡಿಯಲ್ಲಿ ಊತಿಟ್ಟಿರುವುದಾಗಿ ನಮೂದಿಸಿದ್ದರಿಂದ ಶವ ಹೊರ ತೆಗೆಯಲು ಮಧುಗಿರಿ ಉಪ ವಿಭಾಗಾಧಿಕಾರಿಗಳಿಗೆ ಮನವಿ ಪತ್ರವನ್ನು ಘನ ನ್ಯಾಯಾಲಯದ ಅನುಮತಿ ಪಡೆದ ಬಳಿಕ ಸಲ್ಲಿಸಿರುತ್ತೇನೆ.

4. ಅದೇ ದಿನ ಜಿಲ್ಲಾ ಸರ್ಜನ್ ರವರಿಗೆ ಒಂದು ಮನವಿ ಪತ್ರ ಸಲ್ಲಿಸಿ ಶವ ಹೊರ ತೆಗೆಯುವ ವೇಳೆ ಹಾಜರಿದ್ದು, ಸ್ಥಳದಲ್ಲಿ ಶವ ಪರೀಕ್ಷೆ ನಡೆಸಿ ಕೊಡುವಂತೆ ವೈದ್ಯರನ್ನು ನೇಮಿಸಲು ಮನವಿ ಮಾಡಿರುತ್ತೇನೆ. ಅದೇ ದಿನ ಸ್ಥಳ ಪಂಚನಾಮೆ ವೇಳೆ ಹಾಜರಿರಲು ಇಬ್ಬರು ಸರ್ಕಾರಿ ಪಂಚರನ್ನು ನಿಯೋಜಿಸಿ

ಕಳುಹಿಸುವಂತೆ ತಹಶೀಲ್ದಾರ್ ರವರಿಗೂ ಸಹಾ ಮನವಿ ಪತ್ರ ಸಲ್ಲಿಸಿಕೊಂಡಿದ್ದೇನೆ. ಅದೇ ದಿನ ಮಧುಗಿರಿ ಉಪ ವಿಭಾಗಾಧಿಕಾರಿಗಳು ಶವ ಹೊರ ತೆಗೆಯಲು ಶಿರಾ ತಹಶೀಲ್ದಾರ್ ರವರನ್ನು ನೇಮಕ ಮಾಡಿರುವುದಾಗಿ ನಮಗೆ ತಿಳಿಸಿರುತ್ತಾರೆ. ಅದೇ ದಿನ ಚಾ.ಸಾ.10, ಚಾ.ಸಾ.4, ಚಾ.ಸಾ.3, ಚಾ.ಸಾ.2 ರವರುಗಳ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ.

5. ದಿ.03.06.2022 ರಂದು ಬೆಳಿಗ್ಗೆ 7.00 ಗಂಟೆಗೆ ಎ.ಎಸ್.ಐ ನರಸಿಂಹಮೂರ್ತಿ ಹೆಚ್.ಸಿ 59 ನಾಗರಾಜು, ಡಬ್ಲ್ಯೂಪಿಸಿ 735 ವಿಜಯ ರವರುಗಳು ಬೆಳಿಗ್ಗೆ 06.00 ಗಂಟೆಗೆ ಇಬ್ಬರು ಆರೋಪಿತರನ್ನು ಬುಕ್ಕಾ ಪಟ್ಟಣ ಬಸ್ ಸ್ಟಾಪ್ ಬಳಿ ವಶಕ್ಕೆ ಪಡೆದು ನನ್ನ ಮುಂದೆ ಬೆಳಿಗ್ಗೆ 07.00 ಗಂಟೆಗೆ ನನ್ನ ಮುಂದೆ ಹಾಜರುಪಡಿಸಿ, ನಿ.ಪಿ.33 ರಂತೆ ವರದಿ ಕೊಟ್ಟಿರುತ್ತಾರೆ. ಅವರುಗಳನ್ನು ವಿಚಾರ ಮಾಡಿ ದಸ್ತಗಿರಿ ಕ್ರಮ ಜರುಗಿಸಿರುತ್ತೇನೆ ಮತ್ತು ಅವರುಗಳ ಸ್ವ ಇಚ್ಛಾ ಹೇಳಿಕೆ ಪಡೆದಿರುತ್ತೇನೆ. ನಿ.ಪಿ.33 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.33(ಬಿ) ಎಂದು ಗುರುತಿಸಲಾಯಿತು. 1 ನೇ ಅರೋಪಿ ತನ್ನ ಸ್ವ ಇಚ್ಛಾ ಹೇಳಿಕೆಯಲ್ಲಿ'' ನನ್ನನ್ನು ಜೊತೆಯಲ್ಲಿ ಕರೆದುಕೊಂಡು ಹೋದರೆ ನಾನು ಮತ್ತು ಸಾವಿತ್ರಿ ಬಾಯಿ ಇಬ್ಬರು ಸೇರಿ ನನ್ನ ತಮ್ಮನನ್ನು ಕೊಲೆ ಮಾಡಿರುವ ಸ್ಥಳವನ್ನು ಮತ್ತು ಹೆಣವನ್ನು ಊತಿಟ್ಟಿರುವ ಸ್ಥಳವನ್ನು ತೋರಿಸುವುದಾಗಿ '' ನುಡಿದಿರುತ್ತಾರೆ. ಸಾಕ್ಷಿ ಸದರಿ ಸ್ವ ಇಚ್ಛಾ ಹೇಳಿಕೆಯ ಭಾಗವನ್ನು ನೋಡಿ ಗುರುತಿಸಿದ್ದು, ಸ್ವ ಇಚ್ಛಾ ಹೇಳಿಕೆಯನ್ನು ನಿ.ಪಿ.36 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.36(ಎ) ಎಂದು ಗುರುತಿಸಲಾಯಿತು. ಅರೋಪಿಯ ಹೆಬ್ಬೆಟ್ಟಿನ ಗುರುತನ್ನು ಸಾಕ್ಷಿ ನಿ.ಪಿ.36(ಬಿ) ರಲ್ಲಿ ನೋಡಿ ಗುರುತಿಸಿರುತ್ತಾರೆ. ಅದೇ ದಿನ 2 ನೇ ಆರೋಪಿಯ ಸ್ವ ಇಚ್ಛಾ ಹೇಳಿಕೆಯನ್ನು ನೋಡಿ ಗುರುತಿಸಿರುತ್ತಾರೆ. 2 ನೇ ಅರೋಪಿ ತನ್ನ ಸ್ವ ಇಚ್ಛಾ ಹೇಳಿಕೆಯಲ್ಲಿ '' ನನ್ನನ್ನು ಕರೆದುಕೊಂಡು ಹೋದರೆ ನಾನು ಮತ್ತು ರಾಜನಾಯಕ

ಸೇರಿ ಇಬ್ಬರು ಸೇರಿ ನನ್ನ ಗಂಡನನ್ನು ಕೊಲೆ ಮಾಡಿರುವ ಸ್ಥಳವನ್ನು ಮತ್ತು ಹೆಣವನ್ನು ಊತಿಟ್ಟಿರುವ ಸ್ಥಳವನ್ನು ತೋರಿಸುವುದಾಗಿ '' ನುಡಿದಿರುತ್ತಾರೆ. ಸಾಕ್ಷಿ ಸದರಿ ಸ್ವ ಇಚ್ಛಾ ಹೇಳಿಕೆಯ ಭಾಗವನ್ನು ನೋಡಿ ಗುರುತಿಸಿದ್ದು, ಸ್ವ ಇಚ್ಛಾ ಹೇಳಿಕೆಯನ್ನು ನಿ.ಪಿ.37 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.37(ಎ) ಎಂದು ಗುರುತಿಸಲಾಯಿತು. ಅರೋಪಿಯ ಹೆಬ್ಬೆಟ್ಟಿನ ಗುರುತನ್ನು ಸಾಕ್ಷಿ ನಿ.ಪಿ.37(ಬಿ) ರಲ್ಲಿ ನೋಡಿ ಗುರುತಿಸಿರುತ್ತಾರೆ.

6. ಆರೋಪಿಗಳ ಸ್ವ ಇಚ್ಛಾ ಹೇಳಿಕೆಗಳನ್ನು ವಿಡಿಯೋಗ್ರಫಿ ಮಾಡಿಕೊಂಡಿರುತ್ತೇನೆ. ಇವರುಗಳ ಹೇಳಿಕೆಯಂತೆ ತಾಲ್ಲೂಕು ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಚಾ.ಸಾ.7 ಮತ್ತು 8 ರವರನ್ನು ಠಾಣೆಗೆ ಬರಮಾಡಿಕೊಂಡು, ಅವರಿಗೆ ವಿಷಯ ತಿಳಿಸಿ ಪಂಚರಾಗಿ ಸಹಕರಿಸಲು ಕೋರಿರುತ್ತೇನೆ. ಇವರು ಒಪ್ಪಿದ ನಂತರ ಆರೋಪಿಗಳು, ಸಿಬ್ಬಂದಿಯಾದ ಚಾ.ಸಾ.36, ಉಮೇಶ ನಾಯ್ಕ, ತಿಪ್ಪೇಸ್ವಾಮಿ, ಚಾ.ಸಾ.31 ರವರುಗಳೊಂದಿಗೆ ಕಮಲನಾಯಕನ ತಾಂಡ್ಯಕ್ಕೆ ಇಲಾಖಾ ಜೀಪಿನಲ್ಲಿ ಬೇಟಿ ಕೊಟ್ಟಿರುತ್ತೇವೆ. ಆರೋಪಿತರು ಮೃತ ರವಿಚಂದ್ರ ನಾಯಕರವರ ಮನೆಯ ಬಳಿ ಹೋಗಿ ತಾವು ಕೊಲೆ ಮಾಡಿದ ಸ್ಥಳ ಮನೆಯ ಹಾಲ್ ಮಧ್ಯದಲ್ಲಿ ಎಂದು ತೋರಿಸಿದ್ದು ಅಲ್ಲಿ ಪೋಟೋ ತೆಗೆಸಿರುತ್ತೆನೆ. ನಂತರ ಮನೆಯಿಂದ ಉತ್ತರಕ್ಕೆ 30 ಮೀಟರ್ ದೂರದಲ್ಲಿ ಮೃತನನ್ನು ಊತಿಟ್ಟಿದ್ದನ್ನು ತೋರಿಸಿದ್ದು ಆ ಸ್ಥಳದಲ್ಲಿ ಬೆಳಿಗ್ಗೆ 11.00 ರಿಂದ 12.00 ಗಂಟೆ ವರೆಗೆ ಮಹಜರನ್ನು ತಯಾರು ಮಾಡಿ ಆ ಕಾಲಕ್ಕೆ ಪೋಟೋಗಳನ್ನು ತೆಗೆದಿರುತ್ತೇನೆ.

7. ನಂತರ ತಹಶೀಲ್ದಾರ್ ರವರು ಸದರಿ ಊತಿದ್ದ ಸ್ಥಳಕ್ಕೆ ಬಂದು ಮೃತ ದೇಹವನ್ನು ಭೂಮಿಯಿಂದ ಜೆಸಿಬಿಯಿಂದ ಹೊರಕ್ಕೆ ತೆಗೆದು ಆ ಹೆಣಕ್ಕೆ

ಸುತ್ತಿಟ್ಟಿದ್ದ ಬೆಡ್ ಶೀಟ್ ನ್ನು ನನ್ನ ವಶಕ್ಕೆ ನೀಡಿರುತ್ತಾರೆ. ಸದರಿ ಬೆಡ್ ಶೀಟ್ ನ್ನು ಈ ದಿನ ನ್ಯಾಯಾಲಯದ ಮುಂದೆ ನೋಡಿ ಗುರುತಿಸಿದ್ದು, ಸದರಿ ಬೆಡ್ ಶೀಟ್ ನ್ನು ಈಗಾಗಲೇ ಮು.ಮಾ.6 ಎಂದು ಗುರುತಿಸಲಾಗಿದೆ. ಸದರಿ ಶವ ಊತಿದ್ದ ಸ್ಥಳದಲ್ಲಿ ಮಾಡಿದ್ದ ಪಂಚನಾಮೆಯನ್ನು ಈಗಾಗಲೇ ನಿ.ಪಿ.14 ಎಂದು ಗುರುತಿಸಲಾಗಿದೆ. ನಂತರ ಆರೋಪಿತರು ಮುದ್ದೆಮಾಲು ಮತ್ತು ಪಂಚನಾಮೆ ಯೊಂದಿಗೆ ಠಾಣೆಗೆ ವಾಪಸ್ಸು ಬಂದು ಅಮಾನತ್ತು ಪಡಿಸಿಕೊಂಡ ಬೆಡ್ ಶೀಟ್ ನ್ನು ಠಾಣಾ ಮಾಲು ಪಟ್ಟಿ ಸಂಖ್ಯೆ. 112/2022 ರಲ್ಲಿ ಅಳವಡಿಸಿಕೊಂಡಿದ್ದೇನೆ. ನಂತರ ಪೋಸ್ಟ್ ಮಾಟಮ್ ಸಮಯಕ್ಕೆ ವೈದ್ಯರು ಸಂಗ್ರಹಿಸಿಕೊಟ್ಟ ಕಪ್ಪು ಬಣ್ಣದ ಪ್ಯಾಂಟು , ಕೆಂಪು ಬಿಳಿ ಬಣ್ಣದ ತುಂಬು ತೋಳಿನ ಶರ್ಟ್ , ಕಾಪಿ ಕಲರ್ ನ ಒಂದು ಕಾಚ , ಕೆಂಪು ಬಣ್ಣದ ಉಡಿದಾರ ಮತ್ತು ಮೃತನ ಕತ್ತಿನಲ್ಲಿದ್ದ ಕೆಂಪು ಮತ್ತು ಬಿಳಿ ದಾರ ಇವುಗಳನ್ನು ಚಾ.ಸಾ.7 ಮತ್ತು 8 ರವರ ಸಮಕ್ಷಮ ಅಮಾನತ್ತು ಪಡಿಸಿಕೊಂಡಿರುತ್ತೇನೆ. ಅವುಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ಮು.ಮಾ.1 ರಿಂದ 5 ಎಂದು ಗುರುತಿಸಲಾಗಿದೆ. ಪಂಚನಾಮೆಯನ್ನು ಈಗಾಗಲೇ ನಿ.ಪಿ.13 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.13(ಬಿ) ಎಂದು ಗುರುತಿಸಲಾಯಿತು. ಆರೋಪಿತರು ಮುಂದಿನ ತನಿಖೆಗೆ ಅವಶ್ಯಕತೆ ಇಲ್ಲದಿದ್ದರಿಂದ ರಿಮ್ಯಾಂಡ್ ಅರ್ಜಿಯೊಂದಿಗೆ ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ. ಅದೇ ದಿನ ಚಾ.ಸಾ.1, ಚಾ.ಸಾ.2 ರಿಂದ 4, ಚಾ.ಸಾ.10, ಚಾ.ಸಾ.13, ಚಾ.ಸಾ.17, ಚಾ.ಸಾ.18 ಮತ್ತು ಚಾ.ಸಾ.19 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ.

8. ದಿ.04.06.2022 ರಂದು ತುಮಕೂರು ಸರ್ಕಾರಿ ಆಸ್ಪತ್ರೆಯ ವೈದ್ಯರಿಂದ ಮೃತನ ಪಿಎಂ ವರದಿಯನ್ನು ಪಡೆದು ಕಡತಕ್ಕೆ ಅಳವಡಿಸಿರುತ್ತೇನೆ. ಅದನ್ನು ಈಗಾಗಲೇ ನಿ.ಪಿ.31 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು

ನಿ.ಪಿ.31(ಬಿ) ಎಂದು ಗುರುತಿಸಲಾಯಿತು. ಅದೇ ದಿನ ಚಾ.ಸಾ.13 ರವರನ್ನು ಕಲಂ 164 ಸಿಆರ್.ಪಿ.ಸಿ ಅಡಿ ಹೇಳಿಕೆಗಾಗಿ ಮಾನ್ಯ ನ್ಯಾಯಾಧೀಶರ ಮುಂದೆ ಮನವಿಯೊಂದಿಗೆ ಹಾಜರುಪಡಿಸಿರುತ್ತೇನೆ. ಅದೇ ದಿನ ಕಲಂ 164 ಸಿಆರ್.ಪಿ.ಸಿ ಅಡಿ ಹೇಳಿಕೆಯನ್ನು ಪಡೆದಿದ್ದು, ಸದರಿ ಹೇಳಿಕೆಯನ್ನು ನಿ.ಪಿ. 38 ಎಂದು ಗುರುತಿಸಲಾಯಿತು.

9. ದಿ.06.06.2022 ರಂದು ನೇರಳಗುಂಟೆ ಪಂಚಾಯಿತಿ ಕಚೇರಿಯಿಂದ ಕೃತ್ಯ ಸ್ಥಳದ ಪಂಚಾಯ್ತಿ ದಾಖಲೆಗಳನ್ನು ಸ್ವೀಕರಿಸಿರುತ್ತೇನೆ. ಅದನ್ನು ಈಗಾಗಾಲೇ ನಿ.ಪಿ.28 ಮತ್ತು 29 ಎಂದು ಗುರುತಿಸಲಾಗಿದೆ. ದಿ.10.06.2022 ರಂದು ತುಮಕೂರು ಜಿಲ್ಲಾ ಆಸ್ಪತ್ರೆಯಿಂದ ಶವದ ಕೆಲವು ವಸ್ತುಗಳನ್ನು ಸಂಗ್ರಹಿಸಿ ಎಫ್.ಎಸ್.ಎಲ್ ಇಲಾಖೆಗೆ ಕಳುಹಿಸಲು ಕೋರಿದ್ದು, ಅದರಂತೆ ನಾನು ಸದರಿ ವಸ್ತುಗಳನ್ನು ಚಾ.ಸಾ.15 ಮತ್ತು 16 ರವರ ಸಮಕ್ಷಮ ಸಂಜೆ 05.30 ರಿಂದ 06.30 ರವರೆಗೆ ಪಂಚನಾಮೆ ಮಾಡಿ ಅಮಾನತ್ತು ಪಡಿಸಿಕೊಂಡಿದ್ದೇನೆ. ಅದನ್ನು ಅಮಾನತ್ತು ಪಡಿಸಿಕೊಂಡ ವಸ್ತುಗಳನ್ನು ಠಾಣಾ ಮಾಲು ಪಟ್ಟಿ ಸಂಖ್ಯೆ.119/2022 ರಲ್ಲಿ ಅಳವಡಿಸಿಕೊಂಡಿದ್ದೇನೆ. ನಂತರ ಅವುಗಳನ್ನು ನಮ್ಮ ಸಿಬ್ಬಂದಿರವರ ಮುಖಾಂತರ ಎಫ್.ಎಸ್.ಎಲ್ ಇಲಾಖೆಗೆ ಕಳುಹಿಸಿಕೊಟ್ಟಿರುತ್ತೇನೆ. ಸದರಿ ಪಂಚನಾಮೆಯನ್ನು ಈಗಾಗಲೇ ನಿ.ಪಿ.25 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.25(ಬಿ) ಎಂದು ಗುರುತಿಸಲಾಯಿತು. ಸಾಕ್ಷಿ ತಾವು ಸ್ವೀಕರಿಸಿದ ವಸ್ತುಗಳನ್ನು ನೋಡಿ ಗುರುತಿಸಿದ್ದು ಇವುಗಳನ್ನು ಈಗಾಗಲೇ ಮು.ಮಾ.8 ರಿಂದ 12 ಎಂದು ಗುರುತಿಸಲಾಗಿದೆ.

10. ದಿ.23.06.2022 ರಂದು ಚಾ.ಸಾ.14 ಪಾಂಡು ಅಲಿಯಾಸ್ ಪಾಂಡು ನಾಯಕರವರ ಹೇಳಿಕೆಯನ್ನು ಪಡೆದಿರುತ್ತೇನೆ. ಅದೇ ದಿನ ಚಾ.ಸಾ.14

ರವರ ರಕ್ತದ ಮಾದರಿಯನ್ನು ವೈದ್ಯರ ಮುಖಾಂತರ ಸಂಗ್ರಹಿಸಿ, ಡಿಎನ್ಎ ಪರೀಕ್ಷೆಗಾಗಿ ಕೊಡಲು ಮಾನ್ಯ ನ್ಯಾಯಾಲಯಕ್ಕೆ ಮನವಿ ಕೊಟ್ಟಿರುತ್ತೇನೆ. ದಿ.24.06.2022 ರಂದು ಘನ ನ್ಯಾಯಾಲಯದ ಅದೇಶದಂತೆ ಶಿರಾ ಸರ್ಕಾರಿ ಆಸ್ಪತ್ರೆಯಲ್ಲಿರುವ ವೈದ್ಯರು ಚಾ.ಸಾ.14 ರವರ ರಕ್ತದ ಮಾದರಿಯನ್ನು ಸಂಗ್ರಹಿಸಿ ಕೊಟ್ಟಿರುತ್ತಾರೆ. ಅದನ್ನು ಪಂಚರಾದ ಚಾ.ಸಾ.4 ಮತ್ತು ಚಾ.ಸಾ.10 ರವರ ಸಮಕ್ಷಮ ಪಂಚನಾಮೆ ಮಾಡಿರುತ್ತೇನೆ. ಸದರಿ ಪಂಚನಾಮೆ ಯನ್ನು ಈಗಾಗಲೇ ನಿ.ಪಿ.5 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.5(ಸಿ) ಎಂದು ಗುರುತಿಸಲಾಯಿತು. ಅದನ್ನು ಅಮಾನತ್ತು ಪಡಿಸಿಕೊಂಡ ವಸ್ತುಗಳನ್ನು ಠಾಣಾ ಮಾಲು ಪಟ್ಟಿ ಸಂಖ್ಯೆ. 129/2022 ರಲ್ಲಿ ಅಳವಡಿಸಿಕೊಂಡಿದ್ದೇನೆ. ಅದನ್ನು ಈಗಾಗಲೇ ಮು.ಮಾ.7 ಎಂದು ಗುರುತಿಸಲಾಗಿದೆ.

11. ನಂತರ ಚಾ.ಸಾ.14 ರವರ ಹೇಳಿಕೆಯನ್ನು ಕಲಂ 164 ಸಿಆರ್.ಪಿ.ಸಿ ಅಡಿ ದಾಖಲು ಮಾಡಲು ಮಾನ್ಯ ನ್ಯಾಯಾಧೀಶರ ಮುಂದೆ ಮನವಿಯೊಂದಿಗೆ ಹಾಜರುಪಡಿಸಿರುತ್ತೇನೆ. ಅದೇ ದಿನ ಕಲಂ 164 ಸಿಆರ್.ಪಿ.ಸಿ ಅಡಿ ಹೇಳಿಕೆಯನ್ನು ಪಡೆದಿದ್ದು, ಸದರಿ ಹೇಳಿಕೆಯನ್ನು ನಿ.ಪಿ.39 ಎಂದು ಗುರುತಿಸಲಾಯಿತು.

12. ದಿ.27.06.2022 ರಂದು ಮುದ್ದೆ ಮಾಲು.7 ನ್ನು ಎಫ್.ಎಸ್.ಎಲ್ ಇಲಾಖೆಗೆ ನಮ್ಮ ಸಿಬ್ಬಂದಿ ಮುಖಾಂತರ ಕಳುಹಿಸಿಕೊಟ್ಟಿರುತ್ತೇನೆ. ದಿ.11.07.2022 ರಂದು ಎಇಇ ರವರಿಂದ ಕೃತ್ಯ ಸ್ಥಳದ ನಕ್ಷೆಯನ್ನು ಪಡೆದಿರುತ್ತೇನೆ. ಈಗಾಗಲೇ ನಿ.ಪಿ.30 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.30(ಎ) ಎಂದು ಗುರುತಿಸಲಾಯಿತು. ದಿ.25.07.2022 ರಂದು ಚಾ.ಸಾ.20 ಮತ್ತು 21 ರವರ ಹೇಳಿಕೆ ಪಡೆದಿರುತ್ತೇನೆ.

ದಿ.31.07.2022 ರಂದು  ಚಾ.ಸಾ.22, ಚಾ.ಸಾ.23 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ಅದೇ ದಿನ ಚಾ.ಸಾ.36, 33 ರವರುಗಳಿಂದ 65(ಬಿ) ಅಡಿ ಪ್ರಮಾಣಪತ್ರ ವನ್ನು ಪಡೆದಿರುತ್ತೇನೆ.  ಚಾ.ಸಾ.36 ರವರು ನೀಡಿರುವ 65(ಬಿ) ಅಡಿ ಪ್ರಮಾಣಪತ್ರ  ನಿ.ಪಿ.40  ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.40(ಎ) ಎಂದು ಗುರುತಿಸಲಾಯಿತು. ಚಾ.ಸಾ.33 ರವರು ನೀಡಿರುವ 65(ಬಿ) ಅಡಿ ಪ್ರಮಾಣಪತ್ರವನ್ನು ಈಗಾಗಲೇನಿ.ಪಿ.34 ಎಂದು ಗುರುತಿಸಲಾಗಿದ್ದು,  ಸಾಕ್ಷಿಯ ಸಹಿಯನ್ನು ನಿ.ಪಿ.34(ಬಿ) ಎಂದು ಗುರುತಿಸಲಾಯಿತು.  ಈ ಕೇಸಿನ ತನಿಖೆ ಮುಕ್ತಾಯವಾದ್ದರಿಂದ, ತನಿಖೆ ಸಮಯದಲ್ಲಿ ಚಿತ್ರೀಕರಿಸಿದ ಡಿವಿಡಿಗಳನ್ನು ಕಡತಕ್ಕೆ ಅಳವಡಿಸಿ, ಎಫ್.ಎಸ್.ಎಲ್.ವರದಿ ಬಾಕಿ ಇಟ್ಟು, ಆರೋಪಿತರ ವಿರುದ್ದ ಆರೋಪ ಸಾಬೀತಾದ್ದರಿಂದ, ಆರೋಪಿತರ ವಿರುದ್ದ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

13. ನಂತರ ನಿವೃತ್ತಿಯ ನಂತರ  ಬಂದ ತನಿಖಾಧಿಕಾರಿಗಳು ಎಫ್.ಎಸ್.ಎಲ್. ವರದಿ  ಸ್ವೀಕರಿಸಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ಸಾಕ್ಷಿ ಎರಡು ಎಫ್.ಎಸ್.ಎಲ್ ವರದಿಯನ್ನು ನೋಡಿ ಗುರುತಿಸಿದ್ದು, ದಿ.22.03.2023 ರಂದು ನೀಡಿರುವ ಎರಡು ಎಫ್.ಎಸ್.ಎಲ್ ವರದಿಗಳನ್ನು ನಿ.ಪಿ.41 ಮತ್ತು 42 ಎಂದು ಗುರುತಿಸಲಾಯಿತು. ದಿ.26.08.2022 ರ ಎಫ್.ಎಸ್.ಎಲ್ ವರದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ.43 ಎಂದು ಗುರುತಿಸಲಾಯಿತು. ಸಾಕ್ಷಿ  ಆರೋಪಿಗಳು ಕೊಲೆ ಮಾಡಿದ ಸ್ಥಳ ಮತ್ತು ಹೆಣ ಊತಿಟ್ಟಿರುವ ಜಾಗ ತೋರಿಸಿದ ಸ್ಥಳ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಇದನ್ನು ಈಗಾಗಲೇ ನಿ.ಪಿ.12 ಎಂದು ಗುರುತಿಸಲಾಗಿದೆ. ನಿ.ಪಿ.12 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.12(ಬಿ) ಎಂದು ಗುರುತಿಸಲಾಯಿತು. ತನಿಖಾ ಸಮಯದಲ್ಲಿ ತೆಗೆದ ಛಾಯಾಚಿತ್ರಗಳನ್ನು ಸಾಕ್ಷಿ  ನೋಡಿ

ಗುರುತಿಸಿರುತ್ತಾರೆ. ಸ್ಥಳ ಪಂಚನಾಮೆ ಸಮಯದಲ್ಲಿ 2 ಛಾಯಾಚಿತ್ರಗಳನ್ನು ಈಗಾಗಲೇ ನಿ.ಪಿ.8 ಮತ್ತು 9 ಎಂದು ಗುರುತಿಸಲಾಗಿದೆ. ಉಳಿದ ಛಾಯಚಿತ್ರಗಳನ್ನು ನಿ.ಪಿ.15 ರಿಂದ 22 ಎಂದು ಗುರುತಿಸಲಾಗಿದೆ. ಸಾಕ್ಷಿಗೆ ತನಿಖೆಯ ಸಮಯದಲ್ಲಿ ರೆಕಾರ್ಡ್ ಮಾಡಿದ ಸಿಡಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಸದರಿ ಸಿ.ಡಿ.ಯನ್ನು ನ್ಯಾಯಾಲಯದಲ್ಲಿ ಪ್ಲೇ ಮಾಡಿ ತೋರಿಸಲಾಯಿತು. ಸದರಿ ಸಿ.ಡಿಯನ್ನು ನಿ.ಪಿ.44 ಎಂದು ಗುರುತಿಸಲಾಯಿತು. Inquest mahazar ನ್ನು ನಿ.ಪಿ.11 ರಂತೆ ಪಡೆದು ಕಡತಕ್ಕೆ ಅಳವಡಿಸಿರುತ್ತೇನೆ.

**ಪಾಟೀ ಸವಾಲು ಆರೋಪಿಗಳ ಪರ ಶ್ರೀ .ಸಿ.ಡಿ.ಸಿ. ವಕೀಲರಿಂದ**

14. ನಿ.ಪಿ.1 ದೂರನ್ನು ಎಲ್ಲಿಂದ ಟೈಪ್ ಮಾಡಿಕೊಂಡು ಬಂದಿದ್ದರು ಎಂಬ ಬಗ್ಗೆ ನಾನು ತಿಳಿದುಕೊಂಡಿಲ್ಲ. ನಿ.ಪಿ.1 ನ್ನು ನಮ್ಮ ಠಾಣೆಯಲ್ಲಿ ಟೈಪ್ ಮಾಡಿದ್ದೇವೆ ಎಂದರೆ ಸರಿಯಲ್ಲ. ಕೃತ್ಯ ನಡೆದ ಸ್ಥಳವನ್ನು ಪಿರ್ಯಾದುದಾರರು ನನಗೆ ತೋರಿಸಿರುತ್ತಾರೆ. ಕೃತ್ಯ ಸ್ಥಳ ಎಂದರೆ ಮೃತರ ಮನೆ ಮತ್ತು 30 ಮೀಟರ್ ದೂರದಲ್ಲಿದ್ದ ಹೆಣ ಊತಿದ್ದ ಸ್ಥಳ ಎಂದು ತೋರಿಸಿರುತ್ತಾರೆ. ನಿ.ಪಿ.2 ಮಹಜರ್ ನಲ್ಲಿ ಈ ಬಗ್ಗೆ ನಮೂದಿಸಿರುತ್ತೇನೆ. ನಿ.ಪಿ.2 ನ್ನು ನಾನು ಕೃತ್ಯ ಸ್ಥಳದಲ್ಲಿ ತಯಾರು ಮಾಡಿಲ್ಲ, ಅದನ್ನು ಪೋಲೀಸ್ ಠಾಣೆಯಲ್ಲಿ ತಯಾರು ಮಾಡಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯಕ್ಕೆ ಉಪ ವಿಭಾಗಾಧಿಕಾರಿಗಳ ಸಮಕ್ಷಮದಲ್ಲಿ ಊತಿದ್ದ ಹೆಣವನ್ನು ತೆಗೆಯಲು ಅನುಮತಿ ಕೋರಿ ಮನವಿಯನ್ನು ದಿ.02.06.2022 ರಂದು ಸಲ್ಲಿಸಿರುತ್ತೇನೆ. ಆದರೆ ಸಮಯ ನೆನಪಿಲ್ಲ. ನ್ಯಾಯಾಲಯದಿಂದ ಅನುಮತಿ ಪಡೆದು ನಂತರ ಉಪ ವಿಭಾಗಾಧಿಕಾರಿಗಳಿಗೆ ಬರವಣಿಗೆ ಮುಖಾಂತರ ಮನವಿ ಸಲ್ಲಿಸಿರುತ್ತೇನೆ. ಸದರಿ ಮನವಿಯನ್ನು ಠಾಣೆಯಿಂದ ಸಂಜೆ 05.00 ಗಂಟೆಗೆ ಕಳುಹಿಸಿರುತ್ತೇನೆ. 06.10 ಕ್ಕೆ ಅವರು

ಸ್ವೀಕರಿಸಿರುತ್ತಾರೆ. ಅದೇ ದಿನ ಜಿಲ್ಲಾ ಸರ್ಜನ್ ರವರಿಗೂ ಸಹಾ ಮನವಿಯನ್ನು ಕೊಟ್ಟಿದ್ದೇನೆ ಆದರೆ ಸಮಯ ನೆನಪಿಲ್ಲ. ತಹಶೀಲ್ದಾರ್ ರವರಿಗೆ ಪಂಚಾಯ್ತಿದಾರರನ್ನು ಕಳುಹಿಸಿ ಎಷ್ಟು ಸಮಯಕ್ಕೆ ಮನವಿ ಕೊಟ್ಟಿದ್ದೇನೆ ಎಂದು ನೆನಪಿಲ್ಲ. ಆ ದಿನ ಉಪ ವಿಭಾಗಾಧಿಕಾರಿಗಳು, ಜಿಲ್ಲಾ ಸರ್ಜನ್, ತಹಶೀಲ್ದಾರ್ ಯಾವುದೇ ಮನವಿಗಳನ್ನು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಚಾ.ಸಾ.2 ರಿಂದ 4, ಚಾ.ಸಾ.10 ರವರ ಹೇಳಿಕೆಗಳನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಅವರು ನನ್ನ ಮುಂದೆ ಯಾವುದೇ ಹೇಳಿಕೆ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಸ್ಥಳಕ್ಕೆ ಭೇಟಿ ಕೊಟ್ಟಾಗ ಆರೋಪಿತರು ಸದರಿ ಊರಿನಲ್ಲಿಯೇ ಇದ್ದರು ಎಂದರೆ ಸರಿಯಲ್ಲ. ದಿ.03.06.2022 ರಂದು ಸಿಬ್ಬಂದಿಯವರು ಆರೋಪಿತರನ್ನು ನನ್ನ ಮುಂದೆ ಹಾಜರುಪಡಿಸಿ ನಿ.ಪಿ.33 ರಂತೆ ವರದಿ ಕೊಟ್ಟಿದ್ದರು ಎಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ 1 ಮತ್ತು 2 ರವರು ನನ್ನ ಮುಂದೆ ನಿ.ಪಿ.36 ಮತ್ತು 37 ರಂತೆ ಯಾವುದೇ ಸ್ವ ಇಚ್ಛಾ ಹೇಳಿಕೆಯನ್ನು ನೀಡಿಲ್ಲ ಎಂದರೆ ಸರಿಯಲ್ಲ. ಇದೇ ರೀತಿ ಸ್ವ ಇಚ್ಛಾ ಹೇಳಿಕೆ ನೀಡಬೇಕು ಎಂದು ಆರೋಪಿತರಿಗೆ ಹೇಳಿ ಕೊಟ್ಟಂತೆ ನಿ.ಪಿ.44 ರಲ್ಲಿ ಕಂಡು ಬರುತ್ತದೆ ಎಂದರೆ ಸರಿಯಲ್ಲ. ನಿ.ಪಿ.44 ರಲ್ಲಿ ನಾನು ನಾನು ನನ್ನ ನೋಟ್ ಪುಸ್ತಕದಲ್ಲಿ ಬರೆದಿದ್ದನ್ನು ನೋಡುವುದು ಕಂಡು ಬರುತ್ತದೆ ಎಂದರೆ ಸರಿಯಲ್ಲ. ನಿ.ಪಿ.44 ರಲ್ಲಿ ಆರೋಪಿತರು ಯಾವುದೇ ಸ್ವ ಇಚ್ಛಾ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ.

15. ಆರೋಪಿತರ ಸ್ವ ಇಚ್ಛಾ ಹೇಳಿಕೆಗಳನ್ನು ನಾನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರೊಂದಿಗೆ ನಮ್ಮ ಇಲಾಖಾ ಜೀಪಿನಲ್ಲಿ ಚಾ.ಸಾ.7, 8, 31, 36 ರವರೊಂದಿಗೆ ಕಮಲಾ ನಾಯಕನ ತಾಂಡ್ಯಕ್ಕೆ ಭೇಟಿ ಕೊಟ್ಟಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಮೃತ

ರವಿಚಂದ್ರರವರ ಮನೆಯ ಬಳಿ ಹೋಗಿ ಅದೇ ನಾವು ಕೊಲೆ ಮಾಡಿದ ಸ್ಥಳ ಎಂದು ತೋರಿಸಿದರು ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮತ್ತು ಮೃತನನ್ನು ಊತಿಟ್ಟದ ಸ್ಥಳವನ್ನು ಎಂದು ತೋರಿಸಿದರು ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಮನೆ ಮತ್ತು ಊತಿಟ್ಟದ ಸ್ಥಳ ಗಳು ನಮಗೆ ಯಾವುದೇ ಸ್ಥಳವನ್ನು ತೋರಿಸಿಲ್ಲ ಎಂದರೆ ಸರಿಯಲ್ಲ. ಪೋಟೋಗಳನ್ನು ಈ ಕೇಸಿಗೋಸ್ಕರ ಸೃಷ್ಠಿ ಮಾಡಿದ್ದೇನೆ. ಸ್ಥಳದಲ್ಲಿ ಯಾವುದೇ ಮಹಜರ್ ಮಾಡಿಲ್ಲ ಎಂದರೆ ಸರಿಯಲ್ಲ. ಎ.ಸಿ. ರವರ ಆದೇಶವನ್ನು ನ್ಯಾಯಾಲಯಕ್ಕೆ ಕೊಟ್ಟಿರುವುದಿಲ್ಲ. ಎಸಿ ರವರು ತಹಶೀಲ್ದಾರ್ ರವರನ್ನು ಊತಿದ್ದ ಮೃತ ದೇಹ ತೆಗೆಯುವ ಸಲುವಾಗಿ ನೇಮಕ ಮಾಡಿದ್ದ ನಾನನು ದಾಖಲಾತಿಗಳನ್ನು ಹಾಜರುಪಡಿಸಿಲ್ಲ. ಎಸಿ ರವರು ಈ ಪ್ರಕರಣದಲ್ಲಿ ತಹಶೀಲ್ದಾರ್ ರವರನ್ನು ನೇಮಕ ಮಾಡಿಲ್ಲ ಎಂದರೆ ಸರಿಯಲ್ಲ. ತಹಶೀಲ್ದಾರ್ ನನ್ನ ವಶಕ್ಕೆ ಮು.ಮಾ.6 ನ್ನು ಕೊಟ್ಟಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.14 ನ್ನು ಈ ಕೇಸಿಗೋಸ್ಕರ ಸೃಷ್ಠಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಚಾ.ಸಾ.7 ಮತ್ತು 8 ರವರ ಸಮಕ್ಷಮ ನಿ.ಪಿ.13 ರಡಿಯಲ್ಲಿ ಮು.ಮಾ.1 ರಿಂದ 5 ನ್ನು ಅಮಾನತ್ತುಪಡಿಸಿಕೊಂಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.13 ನ್ನು ಈ ಕೇಸಿಗೋಸ್ಕರ ಸೃಷ್ಠಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಂದೆ ಚಾ.ಸಾ.1, 2 ರಿಂದ 4, 10, 13, 17,18 ಮತ್ತು 19 ರವರು ಯಾವುದೇ ಹೇಳಿಕೆಗಳನ್ನು ನೀಡಿಲ್ಲ ಎಂದರೆ ಸರಿಯಲ್ಲ.

16. ಚಾ.ಸಾ.13 ರವರಿಗೆ ನ್ಯಾಯಾಧೀಶರ ಮುಂದೆ ಇದೇ ರೀತಿ ಹೇಳಿಕೆ ಕೊಡಬೇಕು ಹೇಳಿ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.38 ರಂತೆ ಅವರು ಸ್ವ ಇಚ್ಚೆಯಿಂದ ಹೇಳಿಕೆಯನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಿ.ಪಿ.28 ಮತ್ತು

29 ದಾಖಲೆಗಳು ಕೃತ್ಯ ಸ್ಥಳಕ್ಕೆ ಸಂಬಂದಪಟ್ಟಿಲ್ಲ ಎಂದರೆ ಸರಿಯಲ್ಲ. ನಿ.ಪಿ.25 ರಂತೆ ಯಾವುದೇ ಮಹಜರ್ ಮಾಡಿಲ್ಲ ಮತ್ತು ಯಾವುದೇ ವಸ್ತುಗಳನ್ನು ಎಫ್.ಎಸ್.ಎಲ್. ಇಲಾಖೆಗೆ ಕಳುಹಿಸಿಲ್ಲ ಎಂದರೆ ಸರಿಯಲ್ಲ. ಮು.ಮಾ.8 ರಿಂದ 11 ನ್ನು ಎಫ್.ಎಸ್.ಎಲ್. ಇಲಾಖೆಗೆ ಕಳುಹಿಸಿಲ್ಲ ಎಂದರೆ ಸರಿಯಲ್ಲ.

17. ದಿ.24.06.2022 ರಂದು ಶಿರಾ ಸರ್ಕಾರಿ ಆಸ್ಪತ್ರೆಯ ವೈದ್ಯರಿಂದ ಚಾ.ಸಾ.14 ರವರ ರಕ್ತದ ಮಾದರಿಯನ್ನು ಸಂಗ್ರಹಿಸಿ ಕೊಟ್ಟಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮಾ.7 ನ್ನು ನಿ.ಪಿ.5 ರಡಿ ಅಮಾನತ್ತುಪಡಿಸಿಕೊಂಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾ.ಸಾ.14 ರವರಿಗೂ ಸಹಾ ಇದೇ ರೀತಿ ಹೇಳಿಕೆ ಕೊಡಬೇಕು ಹೇಳಿ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಅವರು ನಿ.ಪಿ.39 ರಂತೆ ಅವರು ಸ್ವ ಇಚ್ಚೆಯಿಂದ ಹೇಳಿಕೆಯನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಮು.ಮಾ.7 ನ್ನು ಎಫ್.ಎಸ್ಎಲ್ ಇಲಾಖೆಗ ಕಳುಹಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.30 ನಕ್ಷೆಯನ್ನು ಎ.ಇ.ಇ ರವರಿಂದ ಸೃಷ್ಟಿಸಿ ಕೊಂಡಿದ್ದೇನೆ ಎಂದರೆ ಸರಿಯಲ್ಲ. ದಿ.25.07.2022 ರಂದು ಚಾ.ಸಾ.20 ಮತ್ತು 21 ರವರು, ಚಾ.ಸಾ.23 ರವರು ದಿ.31.07.2022 ರಂದು ನನ್ನ ಮುಂದೆ ಯಾವುದೇ ಹೇಳಿಕೆಗಳನ್ನು ನೀಡಿಲ್ಲ ಎಂದರೆ ಸರಿಯಲ್ಲ. ನಿ.ಪಿ.34 ಮತ್ತು 40 ನ್ನು 65(ಬಿ) ಪ್ರಮಾಣಪತ್ರಗಳನ್ನು ನಮ್ಮ ಸಿಬ್ಬಂದಿಗಳಿಂದ ಸೃಷ್ಟಿಸಿ ಕೊಂಡಿದ್ದೇನೆ ಎಂದರೆ ಸರಿಯಲ್ಲ. ಅವರಿಗೆ 65(ಬಿ) ಪ್ರಮಾಣಪತ್ರಗಳನ್ನು ಕೊಡಲು ಯಾವುದೇ ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ ನಿ.ಪಿ.10, 44 ಮತ್ತು 45 ಸಿಡಿ ಗಳು ಮತ್ತು ಡಿವಿಡಿಗಳನ್ನು ಈ ಪ್ರಕರಣಕೋಸ್ಕರ ಸೃಷ್ಟಿಸಿ ಕೊಂಡಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.41, 42 ಮತ್ತು 43 ಎಫ್.ಎಸ್.ಎಲ್ ವರದಿಗಳನ್ನು ಈ ಪ್ರಕರಣಕೋಸ್ಕರ ಸೃಷ್ಟಿಸಿ ಕೊಂಡಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.12 ನ್ನು

ಠಾಣೆಯಲ್ಲಿ ಸೃಷ್ಟಿಸಿದ್ದೇನೆ ಯಾವುದೇ ಸ್ಥಳದಲ್ಲಿ ಮಾಡಿಲ್ಲ ಎಂದರೆ ಸರಿಯಲ್ಲ. ನಿ.ಪಿ.8, 9, 15 ರಿಂದ 22 ರ ಛಾಯಾಚಿತ್ರಗಳನ್ನು ಈ ಪ್ರಕರಣಕೋಸ್ಕರ ಸೃಷ್ಟಿಸಿ ಕೊಂಡಿದ್ದೇನೆ ಎಂದರೆ ಸರಿಯಲ್ಲ. Inquest mahazar ನ್ನು ನಿ.ಪಿ.11 ರಂತೆ ಪಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿತರ ವಿರುದ್ದ ಯಾವುದೇ ಆರೋಪ ಸಾಬೀತಾಗದೇ ಇದ್ದರೂ ಅವರ ವಿರುದ್ದ ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

2 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು.